ಅಧಿಕ ಸಿವಿಲ್ ಜಡ್ಜ್ ಮತ್ತು ಜೆಎಂಎಫ್ ಸಿ ನ್ಯಾಯಾಲಯ, ಗುಬ್ಬಿ

**FDP-8/2013** ಆರ್.ಡಬ್ಲ್ಯು: **2**

ದಿನಾಂಕ: **27.02.2024** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲು: **3** ನೇ ಎದುರುದಾರರ ಪರ ಶ್ರೀ. ಕೆ ಎಂ ಎಸ್ ವಕೀಲರಿಂದ:

ಅರ್ಜಿದಾರರು ನನ್ನ ಅಕ್ಕ. ನನ್ನ ತಂದೆಯ ಭಾಗಕ್ಕೆ ಬಂದಿರುವ ಆಸ್ತಿಗಳಲ್ಲಿ ನಾನೊಬ್ಬನೇ ಸ್ವಾಧೀನದಲ್ಲಿರುತ್ತೇನೆ. ನಾನು ಮತ್ತು ಅರ್ಜಿದಾರರು ವಿಶ್ವಾಸದಿಂದಿರುತ್ತೇವೆ, ನಾನು ಮತ್ತು ಅರ್ಜಿದಾರರು ಪ್ರತ್ಯೇಕವಾಗಿ ವಾಸವಿರುತ್ತೇವೆ. ನಾನು OS 91/2012 ರಂತೆ ಅರ್ಜಿದಾರರು, 1 ಮತ್ತು 3 ನೇ ಎದುರುದಾರರು ಮತ್ತು ಗೋವಿಂದಯ್ಯ ಎನ್ನುವವರು ಮೇಲೆ ಭಾಗಾಂಶಕ್ಕಾಗಿ ದಾವೆ ಸಲ್ಲಿಸಿರುತ್ತೇನೆ ಎಂದರೆ ನನಗೆ ಗೊತ್ತಿಲ್ಲ. ಸಾಕ್ಷಿ ಮುಂದುವರಿದು ಭಾಗಾಂಶದ ದಾವೆಯನ್ನು 3 ನೇ ಎದುರುದಾರರು ಮತ್ತು ಗೋವಿಂದಯ್ಯ ರವರ ವಿರುದ್ಧ ಸಲ್ಲಿಸಿರುತ್ತೇನೆ ಎನ್ನುತ್ತಾರೆ. ಸದರಿ ದಾವೆ ವಜಾಗೊಂಡಿರುತ್ತದೆ ಎಂದರೆ ಸರಿಯಲ್ಲ, ಸಾಕ್ಷಿ ಮುಂದುವರಿದು, ಸದರಿ ದಾವೆ ಮುನಿವೆಂಕಟಯ್ಯ ಮತ್ತು 3 ನೇ ಎದುರುದಾರರಿಗೆ ಇಬ್ಬರಿಗೂ ಭಾಗಾಂಶ ಬರಬೇಕು ಎಂದು ಡಿಕ್ರಿಯಾಗಿರುತ್ತದೆ ಎನ್ನುತ್ತಾರೆ. ಸದರಿ ದಾವೆಯ ತೀರ್ಪಿನ ವಿರುದ್ಧ ಮಾನ್ಯ ಹಿರಿಯ ಸಿವಿಲ್ ನ್ಯಾಯಾಲಯದಲ್ಲಿ RA 77/2019 ನ್ನು ನಾನೇ ಸಲ್ಲಿಸಿರುತ್ತೇನೆ ಎಂದರೆ ಸರಿ. ದಿಃ 18.08.2021 ರಂದು ಸದರಿ ಅರ್ಜಿ ವಜಾಗೊಂಡಿರುತ್ತದೆ ಎಂದರೆ ನನಗೆ ಗೊತ್ತಿಲ್ಲ, ಸಾಕ್ಷಿ ಮುಂದುವರಿದು, ಮುನಿವೆಂಕಟಯ್ಯ ಮತ್ತು 3 ನೇ ಎದುರುದಾರರಿಗೆ ಇಬ್ಬರಿಗೂ ಭಾಗಾಂಶ ಬರಬೇಕು ಎಂದು ಡಿಕ್ರಿಯಾಗಿರುತ್ತದೆ ಎನ್ನುತ್ತಾರೆ.

ವೆಂಕಟನರಸಮ್ಮ ರವರು 3 ನೇ ಎದುರುದಾರರು ಮತ್ತು ನನ್ನ ತಂದೆ ಮುನಿವೆಂಕಟಯ್ಯ ರವರ ಅಕ್ಕ. ಈಗ ಅವರು ಬದುಕಿಲ್ಲ ಮತ್ತು ಅವರಿಗೆ

ಗೋವಿಂದಯ್ಯ ಎನ್ನುವ ಒಬ್ಬನೆ ಮಗನಿರುತ್ತಾನೆ ಎಂದರೆ ಸರಿ. ಪ್ರಸ್ತುತ ಅರ್ಜಿಯಲ್ಲಿ ಅರ್ಜಿದಾರರು ಸದರಿ ಗೋವಿಂದಯ್ಯ ರವರನ್ನು ಪಕ್ಷಗಾರರನ್ನಾಗಿ ಸೇರಿಸಿರುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ. ದಾವಾ ಆಸ್ತಿಗಳ ಮೇಲೆ ಸದರಿ ಗೋವಿಂದಯ್ಯ ರವರಿಗೂ ಸಹ ಭಾಗಾಂಶದ ಹಕ್ಕಿರುತ್ತದೆ ಎಂದರೆ ಸರಿಯಲ್ಲ. ನಮ್ಮ ಜಮೀನುಗಳಲ್ಲಿ ಸದರಿ ಗೋವಿಂದಯ್ಯ ರವರಿಗೆ ಯಾವುದೇ ಭಾಗಾಂಶವನ್ನು ನಾವು ನೀಡಿರುವುದಿಲ್ಲ.

ತಿರುಮಲಯ್ಯ ರವರ ಮಕ್ಕಳು 1972 ರಲ್ಲಿ ವಿಭಾಗ ಮಾಡಿಕೊಂಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ವಿಭಾಗದಂತೆ ನನ್ನ ತಂದೆ ಮತ್ತು 3 ನೇ ಎದುರುದಾರರು ಸ್ವಾಧೀನದಲ್ಲಿರುತ್ತಾರೆ ಎಂದರೆ ಸಾಕ್ಷಿ ನನ್ನ ತಂದೆ ಮತ್ತು 3 ನೇ ಅರ್ಜಿದಾರರು ಒಟ್ಟಿಗೆ ಜಮೀನುಗಳಲ್ಲಿ ಉಳುಮೆ ಮಾಡುತ್ತಿದ್ದಾರೆ ಎನ್ನುತ್ತಾರೆ. ಸರ್ವೆ ನಂ. 48/2 ರಲ್ಲಿ 1 ಎಕರೆ 17 ಗುಂಟೆ ಜಮೀನು ಇರುತ್ತದೆ ಎಂದರೆ ಸರಿ. ಸದರಿ ಜಮೀನಿನಲ್ಲಿ ನನ್ನ ತಂದೆ ಮತ್ತು 3 ನೇ ಎದುರುದಾರರು ತಲಾ 28 1/2 ಗುಂಟೆ ಜಮೀನಿನಲ್ಲಿ ಸ್ವಾಧೀನದಲ್ಲಿರುತ್ತೇವೆ ಎಂದರೆ ಸಾಕ್ಷಿ ನಾವು ಪ್ರತ್ಯೇಕವಾಗಿ ಸ್ವಾಧೀನದಲ್ಲಿರುತ್ತೇವೆ, ಅದರ ವಿಸ್ತೀರ್ಣ ಎಷ್ಟು ಎಂದು ನನಗೆ ಗೊತ್ತಿಲ್ಲ ಎನ್ನುತ್ತಾರೆ.

ಸರ್ವೆ ನಂ. 48/2 ರಲ್ಲಿ ನರಸಯ್ಯ, ತಿಮ್ಮಯ್ಯ ಮತ್ತು ತಿರುಮಲಯ್ಯ ರವರಿಗೆ 3 ಭಾಗಗಳಾಗಿರುತ್ತವೆ. ಸದರಿ ತಿಮ್ಮಯ್ಯ ರವರ ಮೊಮ್ಮಕ್ಕಳು ಮಾತ್ರ ಇರುತ್ತಾರೆ. ಅವರುಗಳನ್ನು ಅರ್ಜಿದಾರರು ಪ್ರಸ್ತುತ ಅರ್ಜಿಯಲ್ಲಿ ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ. ದಾವಾ ಸ್ವತ್ತು ಐಟಂ ನಂ. 5 ರ ಹಳೇ ಸರ್ವೆ ನಂ. 34. ಸದರಿ ಜಮೀನು ಸರ್ವೆ ನಂ. 34/2 ಮತ್ತು 34/3 ಆಗಿ ಎರಡು ಪೋಡಿಗಳಾಗಿರುವುದು ನನಗೆ ಗೊತ್ತಿಲ್ಲ. ಸದರಿ ಸರ್ವೆ ನಂ. 34 ರಲ್ಲಿ ಒಟ್ಟು 3 ಎಕರೆ 17 ಗುಂಟೆ ಜಮೀನು ಇದ್ದು, ಮುನಿವೆಂಕಟಯ್ಯ ಮತ್ತು 3 ನೇ ಎದುರುದಾರರಿಗೆ ತಲಾ 1 ಎಕರೆ 1 ಗುಂಟೆ ವಿಭಾಗ ವಾಗಿರುತ್ತದೆ. ಇನ್ನುಳಿದ 1 ಎಕರೆ 15 ಗುಂಟೆ ಜಮೀನು ಗವಿನರಸಮ್ಮ ರವರ ಭಾಗಕ್ಕೆ ಬಂದಿರುತ್ತದೆ ಎನ್ನುತ್ತಾರೆ. ನಾನು ಸದರಿ ಜಮೀನಿನ 1 ಎಕರೆ 1 ಗುಂಟೆ ಜಮೀನಿನಲ್ಲಿ ಸ್ವಾಧೀನದಲ್ಲಿರುತ್ತೇನೆ.

ದಾವಾ ಸ್ವತ್ತು  ಐಟಂ ನಂ.4 12 ಗುಂಟೆ ಇರುತ್ತದೆ ಎಂದರೆ ಸಾಕ್ಷಿ 24 ಗುಂಟೆ ಇರುತ್ತದೆ ಎನ್ನುತ್ತಾರೆ. ಸದರಿ ದಾವಾ ಸ್ವತ್ತು ಐಟಂ ನಂ.4 ರಲ್ಲಿ ನಾನು ಮತ್ತು 3 ನೇ ಎದುರುದಾರರು ಪ್ರತ್ಯೇಕವಾಗಿ ಸ್ವಾಧೀನದಲ್ಲಿರುತ್ತೇವೆ ಅದರ ವಿಸ್ತೀರ್ಣ ನನಗೆ ಗೊತ್ತಿಲ್ಲ. ಸದರಿ ಜಮೀನಿನಲ್ಲಿ 6 ಗುಂಟೆ ವಿಸ್ತೀರ್ಣದಲ್ಲಿ ಸ್ವಾಧೀನದಲ್ಲಿರುತ್ತೇನೆ ಎಂದರೆ ಸಾಕ್ಷಿ ನನಗೆ ನಿಖರವಾಗಿ ವಿಸ್ತೀರ್ಣ ಗೊತ್ತಿಲ್ಲ ಎನ್ನುತ್ತಾರೆ.  ದಾವಾ ಸ್ವತ್ತು ಐಟಂ ನಂ.4 ರಲ್ಲಿ ಅರ್ಜಿದಾರರು ಮತ್ತು ನಾನು 2 ಗುಂಟೆ ಜಮೀನಿನಲ್ಲಿ ಒಟ್ಟಾಗಿ ಸ್ವಾಧೀನದಲ್ಲಿರುತ್ತೇವೆ ಎಂದರೆ ಸರಿಯಲ್ಲ.

ದಾವಾ ಸ್ವತ್ತು ಐಟಂ ನಂ.1 ರಲ್ಲಿ ಅರ್ಜಿದಾರರು ಮತ್ತು ನಾನು 12 1/2 ಗುಂಟೆ  ಜಮೀನಿನಲ್ಲಿ ಒಟ್ಟಾಗಿ ಸ್ವಾಧೀನದಲ್ಲಿರುತ್ತೇವೆ ಎಂದರೆ ಸಾಕ್ಷಿ ಸದರಿ ಜಮೀನಿನಲ್ಲಿ ನಾನು ಸ್ವಾಧೀನದಲ್ಲಿರುತ್ತೇನೆ, ಅದರ ವಿಸ್ತೀರ್ಣ ನನಗೆ ಗೊತ್ತಿಲ್ಲ. ದಾವಾ ಸ್ವತ್ತುಐಟಂ ನಂ.3 ರಲ್ಲಿ ಅರ್ಜಿದಾರರು ಮತ್ತು ನಾನು 17 ಗುಂಟೆ ಜಮೀನಿನಲ್ಲಿ ಒಟ್ಟಾಗಿ ಸ್ವಾಧೀನದಲ್ಲಿರುತ್ತೇವೆ ಎಂದರೆ ನನಗೆ ಗೊತ್ತಿಲ್ಲ.

ದಾವಾ ಸ್ವತ್ತುಐಟಂ ನಂ.2 ನ್ನು  ತಿರುಮಲಯ್ಯ ರವರು ವೆಂಕಟನರಸಮ್ಮ ರವರ ಮಗನ ಕಡೆಯಿಂದ  ಪಡೆದುಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು ಅದು ನನ್ನ ತಾತನಿಗೆ ಸೇರಿದ್ದು ಎನ್ನುತ್ತಾರೆ. ಸದರಿ ಸಾಲವನ್ನು ತೀರಿಸಲು 1991 ರಲ್ಲಿ ಪಂಚಾಯಿತಿ ಪಾರಿಕತ್ ನ ಮುಖಾಂತರ ಮುನಿವೆಂಕಟಯ್ಯ ಮತ್ತು 3 ನೇ ಎದುರುದಾರರು ದಾವಾ ಸ್ವತ್ತು ಐಟಂ ನಂ.2 ನ್ನು  ಗೋವಿಂದಯ್ಯ ರವರಿಗೆ ಬಿಟ್ಟುಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಅದರಂತೆ 3 ನೇ ಎದುರುದಾರರ ಹೆಸರಿಗೆ ದಾವಾ ಸ್ವತ್ತುಐಟಂ ನಂ.2  ರ ಖಾತೆ ಮತ್ತು ಪಹಣಿ ತಪ್ಪಾಗಿ ವರ್ಗಾವಣೆಯಾಗಿರುತ್ತದೆ ಎಂದರೆ ಸಾಕ್ಷಿ ಅದನ್ನು ಮೋಸದಿಂದ ಮಾಡಿಕೊಂಡಿರುತ್ತಾರೆ ಎನ್ನುತ್ತಾರೆ. ಸದರಿ ವಿಚಾರಕ್ಕೆ ಸಂಬಂಧಿಸಿದಂತೆ ಗೋವಿಂದಯ್ಯ ರವರು ಉಪವಿಭಾಗಾಧಿಕಾರಿಗಳ ನ್ಯಾಯಾಲಯದಲ್ಲಿ ಅರ್ಜಿಯನ್ನು ಸಲ್ಲಿಸಿದ್ದರು ಸದರಿ ಅರ್ಜಿ

ಊರ್ಜಿತಗೊಂಡಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಉಪವಿಭಾಗಾಧಿಕಾರಿಗಳ ನ್ಯಾಯಾಲಯದ ಆದೇಶದ ಮೇರೆಗೆ ನಾನು ಜಿಲ್ಲಾಧಿಕಾರಿಗಳ ನ್ಯಾಯಾಲಯಕ್ಕೆ ಮೇಲ್ಮನವಿ ಸಲ್ಲಿಸಿರುತ್ತೇನೆ ಎಂದರೆ ಸರಿ . ಸದರಿ ಮೇಲ್ಮನವಿ ವಜಾಗೊಂಡಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ನಂತರ ದಾವಾ ಸ್ವತ್ತು ಐಟಂ ನಂ.2 ರ ಖಾತೆ ಮತ್ತು ಪಹಣಿ ಗೋವಿಂದಯ್ಯ ರವರ ಹೆಸರಿಗೆ ವರ್ಗಾವಣೆಯಾಗಿರುತ್ತದೆ ಎಂದರೆ ಸಾಕ್ಷಿ ಮೋಸದಿಂದ ಮಾಡಿಕೊಂಡಿರುತ್ತಾರೆ ಎನ್ನುತ್ತಾರೆ. ನಾನು ಜಿಲ್ಲಾಧಿಕಾರಿಗಳ ಆದೇಶದ ವಿರುದ್ಧ ಯಾವುದೇ ಮೇಲ್ಮನವಿ ಸಲ್ಲಿಸಿರುವುದಿಲ್ಲ.

ಸದರಿ ಗೋವಿಂದಯ್ಯ ರವರು ದಿಃ 04.06.2011 ರಂದು ದಾವಾ ಸ್ವತ್ತು ಐಟಂ ನಂ.2 ನ್ನು 3 ನೇ ಎದುರುದಾರರ ಹೆಸರಿಗೆ ಕ್ರಯ ಮಾಡಿಕೊಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ದಾವಾ ಸ್ವತ್ತು ಐಟಂ ನಂ.2 ರಲ್ಲಿ 3 ನೇ ಎದುರುದಾರರು ಬೋರ್ವೆಲ್ ಕೊರೆಸಿರುತ್ತಾರೆ ಮತ್ತು ಅಡಿಕೆ ಮತ್ತು ತೆಂಗಿನ ಗಿಡಗಳನ್ನು ಬೆಳೆಸಿರುತ್ತಾರೆ ಎಂದರೆ ಸಾಕ್ಷಿ ಸದರಿ ಜಮೀನು ಪಾಳು ಬಿದ್ದಿರುತ್ತದೆ ಎನ್ನುತ್ತಾರೆ. ದಾವಾ ಸ್ವತ್ತು ಐಟಂ ನಂ.2 ರ ಮೇಲೆ 3 ನೇ ಎದುರುದಾರರು ಸಾಲವನ್ನು ಪಡೆದುಕೊಂಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಈ ವಿಚಾರದ ಬಗ್ಗೆ ನನಗೆ ತಿಳಿದಿದ್ದರೂ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಈ ವಿಚಾರಗಳು ತಿಳಿದಿದ್ದರೂ ಸಹ ಅರ್ಜಿದಾರರು ನನ್ನ ಮತ್ತು 1 ನೇ ಎದುರುದಾರರ ವಿರುದ್ದ OS 121/1998 ರಂತೆ ದಾವೆ ಸಲ್ಲಿಸಿ ಏಕತರ್ಪಿಯವಾಗಿ ಡಿಕ್ರಿ ಪಡೆದಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ OS 121/1998 ರಲ್ಲಿ ಡಿಕ್ರಿಯಾಗಿರುವ ವಿಚಾರ ನಾನು ಸಲ್ಲಿಸಿದ್ದ OS 91/2012 ದಾವೆ ವಜಾಗೊಂಡ ನಂತರ 3 ನೇ ಎದುರುದಾರರಿಗೆ ತಿಳಿದಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. OS.121/1998 ರಲ್ಲಿ ವೆಂಕಟನರಸಮ್ಮನನ್ನು ನನ್ನ ಅಕ್ಕ ಅರ್ಜಿದಾರರು ಪಕ್ಷಗಾರರನ್ನಾಗಿ ಸೇರಿಸಿರುವುದಿಲ್ಲ ಎಂದರೆ ನನಗೆ

ಗೊತ್ತಿಲ್ಲ.  ಈ ಅರ್ಜಿಯಲ್ಲಿಯೂ ಸಹ ವೆಂಕಟನರಸಮ್ಮ ರವರ ಮಗನಾದ ಗೋವಿಂದಯ್ಯ ರವರನ್ನು ಪಕ್ಷಗಾರರನ್ನಾಗಿ ಅರ್ಜಿದಾರರು ಸೇರಿಸಿರುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ. ದಾವಾ ಸ್ವತ್ತುಗಳ ಮೇಲೆ ಗೋವಿಂದಯ್ಯ ರವರಿಗೂ ಸಹ ಹಕ್ಕು ಇರುತ್ತದೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ**.**

**(**ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು**)**

ಓ **.** ಹೇ**.** ಕೇ**.** ಸರಿ**.** ಇದೆ

ಅಧಿಕ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್ ಸಿ **,** ಗುಬ್ಬಿ**.**